ಒ ಎಸ್ 157-2013

ಪಿಡಬ್ಲ್ಯೂ- 1

(ದಿನಾಂಕ 02-08-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಜೆ.ಎಸ್. ವಕೀಲರಿಂದಃ-**

1ನೇ ವಾದಿಯು ನನ್ನ ಅಣ್ಣನಾಗಬೇಕು. ಆತನಿಗೆ ಹೆಂಡತಿ ಮತ್ತು ಮಕ್ಕಳು ಇದ್ದಿರುತ್ತಾರೆ. ಆತನ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಅವರಿಗೆ ಜಿನ್ನಾ ಬಿ ಮತ್ತು ತೈರಾನ್ ಬಿ ಎಂಬ ಮಕ್ಕಳಿದ್ದು, ಅವರನ್ನು ಈ ದಾವೆಯುಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಎ ಗೆ ಇಬ್ಬರು ಮಕ್ಕಳಿದ್ದು ಅವರಿಗೆ ಪಕ್ಷಿಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಪ್ರತಿವಾದಿ 2 ಮರಣ ಹೊಂದಿದ್ದು ಆತನ ಹೆಂಡತಿಯಾದ ಸೇರಿಷವ್ವ ನಿಗೆ ಪಕ್ಷಿಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ 2 ನಿಗೆ ರಜಾಕ್ ಸಾಬ್ ಎಂಬ ಮಗನಿದ್ದು ಆತನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅದೇ ರೀತಿ 3 ನೇ ಪ್ರತಿವಾದಿ ಮರಣ ಹೊಂದಿದ್ದು, ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತಹ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ನನಗೆ ದಾವಾ ಆಸ್ತಿಗಳಲ್ಲಿ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ಪಕ್ಷಗಾರರನ್ನಾಗಿ ಮಾಡದೇ ಇರುವವರಿಗೂ ಸಹ ದಾವಾ ಆಸ್ತಿಯಲ್ಲಿ ಪಾಲು ಇದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳಿಗೆ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗಳದ್ದು ಬೇರೆ ವಂಶ, ಪ್ರತಿವಾದಿಗಳದ್ದು ಬೇರೆ ವಂಶ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಕುಟುಂಬದಲ್ಲಿ ಒಂದೇ ಹೆಸರಿನ ಬಹಳ ಜನರಿದ್ದಿರುತ್ತಾರೆ ಎಂದರೆ ಸರಿ. ಅದರಂತೆ ರಸೂಲ್ ಸಾಬ್ ಎನ್ನುವ ಹೆಸರಿನವರು ಇದ್ದಾರೆ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿಗಳಿಗೆ ಸೇರಿದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿ 1 ರಿಂದ 3 ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಎರಡು ಕುಟುಂಬದಲ್ಲಿ ಒಂದೇ ಹೆಸರು ಇರುವುದರಿಂದ ಅದರ ದುರ್ಲಾಭ ಪಡೆದು ಲಾಭ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 1 (ಎ) ಶಿಗೇನಹಳ್ಳಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಾಲ್ವಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 (ಎ) ಅಕ್ಕನವರನ್ನು ಮಾಲವಿ ಮದುವೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ರಿಂದ 3 ನೇ ಪ್ರತಿವಾದಿಯ ಹೆಸರಿನಲ್ಲಿ 30 ವರ್ಷಗಳ ಹೆಚ್ಚಿನ ಕಾಲದಿಂದ ಇಲ್ಲಿಯವರೆಗೂ ಇದ್ದಿರುತ್ತವೆ. ದಾವಾ ಆಸ್ತಿಯಲ್ಲಿ ಸಾಗುವಳಿಯನ್ನು ಪ್ರತಿವಾದಿಗಳು

ಮಾಡುತ್ತಿರುತ್ತಾರೆ. ನಾನು ಈಗಿನ ಕೊಟ್ಟೂರು ತಾಲ್ಲೂಕಿನ ಚಪ್ಪರದಳ್ಳಿಯಲ್ಲಿ ವಾಸವಿರುತ್ತೇನೆ. ನನಗೂ ಪ್ರತಿವಾದಿಗಳಿಗೂ ಸಂಬಂದವಿಲ್ಲದೇ ಇದ್ದರೂ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೇ ಸಾಗುವಳಿ ಮಾಡುತ್ತಿರುವುದರಿಂದ ಹಾಗೂ ಪಹಣಿ ಪತ್ರಿಕೆಗಳು ಅವರ ಹೆಸರಿನಲ್ಲಿ ಇದ್ದರೂ ಸಹ ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಂಬಂದ ಕಲ್ಪಿಸಲು ವಂಶ ವೃಕ್ಷವನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ಬರಗಾಲದಲ್ಲಿ ಊರು ಬಿಟ್ಟು ಹೊಗಿದ್ದು, ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಉಳುವೆ ಮಾಡಲು ಹೇಳಿರುತ್ತೇನೆ. ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ದಾವಾಣಗೇರೆ ಜಿಲ್ಲೆಯ ಬಾನುವಳ್ಳಿಯಲ್ಲಿ ವಾಸವಾಗಿದ್ದೇನೆಂದು ಬರೆಯಿಸಿದ್ದೇನೆಂದರೆ ಸರಿ. ನಾನು ಅದಕ್ಕೆ ಸಂಬಂದಪಟ್ಟಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯ ಮತ್ತು ಸ್ವಾಧೀನ ಅನುಭವ ಮತ್ತು ಮಾಲೀಕತ್ವವನ್ನು ಹೊಂದಿದ್ದರೂ ಸಹ ನಾನು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ.